ಇ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ಸರ್ಕಾರಿ ಕಟ್ಟಡಗಳಿಗೆ ಪ್ರತಿವರ್ಷ ಸುಣ್ಣಬಣ್ಣ ಬಳಿಯುವ ಕಾಮಗಾರಿಗಳಿಗೆ ಸರಾಸರಿ ರೂ. 3,83,87,000-00 ಗಳು ಖರ್ಚಾಗುತ್ತದೆ.

ಆ) ಕಳಪೆ ಕಾಮಗಾರಿಗಳು ನಡೆಯದಿರುವುದರಿಂದ ಅವ್ಯವಹಾರದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು

1222(1653) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲಾಗಿರುವ ಉದ್ಯೋಗ ಆಕಾಂಕ್ಷಿಗಳ ಸಂಖ್ಯೆ ಎಷ್ಟು;

ಆ) ನೊಂದಾಯಿಸಿರುವಲ್ಲಿ ವಯೋಮಿತಿ ಮೀರಿದವರ ಸಂಖ್ಯೆ ಎಷ್ಟು : ಆ ಪೈಕಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ದಿನಾಂಕ: 31-12-1999ರ ಅಂತ್ಯಕ್ಕೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ 18,77,415.

ಆ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 31-12-99ರ ಅನ್ವಯ ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಎಲ್ಲಾ ನೊಂದಾಯಿತ ಅಭ್ಯರ್ಥಿಗಳ ವಯೋಮಿತಿ ವಿಂಗಡನಾಧಾರಿತ ಮಾಹಿತಿ ಈ ಕೆಳಕಂಡಂತಿದೆ :

ಅ) 19 ವರ್ಷದವರೆಗೆ	3,22,655
ಆ) 20-29 ವರ್ಷದವರೆಗೆ	9,09,768
ಇ) 30-39 ವರ್ಷದವರೆಗೆ	5,38,091
ಈ) 40 ವರ್ಷ ಮೇಲ್ಪಟ್ಟು	1,06,901
ಒಟ್ಟು	**18,77,415**